**ದಿನಾಂಕಃ 04.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

**5**. ಪಿರ್ಯಾದುದಾರರು ನನಗೆ ನಿ.ಪಿ.1 ರಂತೆ ಎಸ್‌ಪಿಎ ಅನ್ನು ನೀಡಿರುತ್ತಾರೆ. ಚೆಕ್ ಬೌನ್ಸ್ ಪ್ರಕರಣಕ್ಕೆ ಸಂಬಂಧಿಸಿದಂತ ನನಗೆ ನಿ.ಪಿ.1 ನೀಡಿರುತ್ತಾರೆ. ನಿ.ಪಿ.1 ಅನ್ನು ಯಾರು ತಯಾರಿಸಿದ್ದರು ಎಂದರೆ ಸಾಕ್ಷಿಯು ವಕೀಲರು ತಯಾರು ಮಾಡಿ ನಮ್ಮ ಕಚೇರಿಗೆ ಮೇಲ್ ಮಾಡಿದರು ಅದರ ಪ್ರಿಂಟ್ ಔಟ್ ತೆಗೆದುಕೊಂಡಿರುತ್ತೇವೆ. ನಿ.ಪಿ.1 ಅನ್ನು ತಯಾರು ಮಾಡುವಾಗ ನಾನು ಮತ್ತು ಪಿರ್ಯಾದುದಾರರ ಸಂಸ್ಥೆಯ ಮಾಲೀಕರು ಹಾಜರಿದ್ದೆವು. ನಿ.ಪಿ.1 ಅನ್ನು ನಮ್ಮ ಕಚೇರಿಯಲ್ಲಿ ಪ್ರಿಂಟ್ ಔಟ್ ತೆಗೆದು ನಮ್ಮ ಕಚೇರಿಯಲ್ಲಿ ಸಹಿ ಮಾಡಿದ್ದೆನು. ನಿ.ಪಿ.1 ಅನ್ನು ಓದಿ ತಿಳಿದುಕೊಂಡಿರುತ್ತೇನೆ. ನ್ಯಾಯಾಲಯದಲ್ಲಿ ಹಾಜರಾಗಿ ಸಾಕ್ಷ್ಯ ನುಡಿಯಲು ನಿ.ಪಿ.1 ರಲ್ಲಿ ನನಗೆ ಅಧಿಕಾರ ನೀಡಿದ್ದಾರೆ. ನಿ.ಪಿ.1 ರಲ್ಲಿ ನಿಮಗೆ ಸಾಕ್ಷ್ಯ ನೀಡಲು ಅಧಿಕಾರ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**6.** ಆರೋಪಿ ಹಾಗೂ ಪಿರ್ಯಾದುದಾರರ ನಡುವಿನ ವ್ಯವಹಾರದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇದೆ. ಆರೋಪಿ ಹಾಗೂ ಪಿರ್ಯಾದುದಾರರ ನಡುವೆ ವ್ಯವಹಾರಕ್ಕೆ ನೀವು ಸಾಕ್ಷಿದಾರರಾಗಿದ್ದೀರಾ ಎಂದರೆ ಸಾಕ್ಷಿಯು ನನ್ನ ಸಮಕ್ಷಮ ನಡೆದಿರುತ್ತದೆ ಎಂದು ನುಡಿಯುತ್ತಾರೆ. ನಿಮಗೆ ಸದರಿ ವ್ಯವಹಾರದ ಬಗ್ಗೆ ವೈಯಕ್ತಿಕ ಮಾಹಿತಿ ಇದ್ದ ಬಗ್ಗೆ ನಿ.ಪಿ.1 ರಲ್ಲಿ ನಮೂದಿಸಿದೆಯೇ ಎಂದರೆ ಸಾಕ್ಷಿಯು ಆ ದಾಖಲೆಯನ್ನು ನೋಡದೇ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ನಿ.ಪಿ.1 ಅನ್ನು ಪರಿಶೀಲಿಸಿ ಅದರಲ್ಲಿ ನಮೂದಿರುತ್ತದೆ ಎಂದು ನುಡಿಯುತ್ತಾರೆ. ನಿ.ಪಿ.1 ರಲ್ಲಿ ನಿಮಗೆ ಪಿರ್ಯಾದುದಾರರು ಮತ್ತು ಆರೋಪಿತರ

ನಡುವಿನ ವ್ಯವಹಾರದ ಬಗ್ಗೆ ವೈಯಕ್ತಿಕ ಮಾಹಿತಿ ಇರುವ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಪಿರ್ಯಾದುದಾರರ ಸಂಸ್ಥೆಯಲ್ಲಿ ಅಕೌಂಟೆಂಟ್ ಆಗಿರುವ ಕಾರಣ ನನಗೆ ಪ್ರಕರಣದ ಬಗ್ಗೆ ವೈಯಕ್ತಿಕ ಮಾಹಿತಿ ಇದೆ ಎಂದು ನುಡಿಯುತ್ತಾರೆ. ಪಿರ್ಯಾದಿನಲ್ಲಿಯೂ ಸಹ ನಿಮಗೆ ವ್ಯವಹಾರದ ಬಗ್ಗೆ ವೈಯಕ್ತಿಕ ಮಾಹಿತಿ ಇರುವ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಸುಮಾರು 35 ವರ್ಷಗಳಿಂದ ಪಿರ್ಯಾದುದಾರರ ಸಂಸ್ಥೆ ಚಾಲ್ತಿಯಲ್ಲಿರುತ್ತದೆ. ನಿಮ್ಮ ಸಂಸ್ಥೆಯಲ್ಲಿ ಯಾರಿಗಾದರೂ ಸಾಲ ನೀಡಿದ್ದಲ್ಲಿ ಯಾವ ಯಾವ ದಾಖಲೆಗಳನ್ನು ಪಡೆದುಕೊಳ್ಳುತ್ತೀರಾ ಎಂದರೆ ಸಾಕ್ಷಿಯು ಮುಂಗಡವಾಗಿ ಚೆಕ್ಕನ್ನು ಪಡೆದುಕೊಳ್ಳುತ್ತೇವೆ, ಚೆಕ್ಕನ್ನು ಹೊರತುಪಡಿಸಿ ಬೇರೆ ದಾಖಲೆಗಳನ್ನು ಪಡೆದುಕೊಳ್ಳುವುದಿಲ್ಲ ಎಂದು ನುಡಿಯುತ್ತಾರೆ. ನೀವು ಸಾಲ ಕೊಟ್ಟ ನಂತರ ಅದರ ಬಡ್ಡಿಯನ್ನು ಯಾವ ಆಧಾರದ ಮೇಲೆ ಪಡೆದುಕೊಳ್ಳುತ್ತೀರಿ Reducing balance ರೀತಿಯಲ್ಲಿ ಪಡೆದುಕೊಳ್ಳುತ್ತೇವೆ ಎಂದು ನುಡಿಯುತ್ತಾರೆ. ಆರೋಪಿಯು ವಾರ್ಷಿಕ ಶೇಕಡ 16 ರಷ್ಟು ಬಡ್ಡಿ ಪಾವತಿ ಮಾಡಲು ಒಪ್ಪಿಕೊಂಡಿದ್ದಾರೆಯೇ ಎಂದರೆ ಸಾಕ್ಷಿಯು ನಾವು ಆರೋಪಿಗೆ ಸಾಲ ನೀಡುವ ಮೊದಲು ಎಲ್ಲಾ ವಿಷಯಗಳನ್ನು ತಿಳಿಸಿ ಅವರು ಒಪ್ಪಿಕೊಂಡ ನಂತರ ಅವರಿಗೆ ಸಾಲ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಶೇಕಡ 16 ರಷ್ಟು ಬಡ್ಡಿ ವಿಧಿಸಿದ ಬಗ್ಗೆ ನೀವು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲಎಂದರೆ ಸಾಕ್ಷಿಯು ನಿ.ಪಿ.2 ರಂತೆ money lending license ಅನ್ನು ಹಾಜರುಪಡಿಸಿದ್ದು ಅದರಲ್ಲಿ ಬಡ್ಡಿಯ ಬಗ್ಗೆ ನಮೂದಿಸಲಾಗಿರುತ್ತದೆ ಎಂದು ನುಡಿಯುತ್ತಾರೆ.

**7.** ಆರೋಪಿಗೆ ಸಾಲ ನೀಡುವ ವೇಳೆಯಲ್ಲಿ ಸಾಲದ ಕರಾರು ಪತ್ರವನ್ನಾಗಲೀ, ಆನ್ ಡಿಮಾಂಡ್ ಪ್ರೊನೋಟ್‌ನ್ನಾಗಲೀ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು

ಪಡೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಪಿರ್ಯಾದುದಾರ ಸಂಸ್ಥೆ ನಡೆಸುವಂತಹ ದಾಖಲೆಗಳನ್ನು ಸಂಬಂಧಿಸಿದ ಇಲಾಖೆಗೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಂತಹ ದಾಖಲೆ ಪತ್ರಗಳನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಲು ನಿಮಗೆ ತೊಂದರೆ ಇರುವುದಿಲ್ಲ ಎಂದರೆ ಸರಿ. ಆರೋಪಿಗೆ 15 ಲಕ್ಷ ರೂ.ಗಳನ್ನು ನೀಡಿರುವ ಬಗ್ಗೆ ನಿಮ್ಮ ಲೆಕ್ಕ ಪತ್ರಗಳಲ್ಲಿ ನಮೂದಿಸಿದ್ದೀರಾ ಎಂದರೆ ನಮೂದಿಸಿದ್ದೇನೆ ಎಂದು ನುಡಿಯುತ್ತಾರೆ. ಆರೋಪಿಯ ಸಾಲದ ಮೊತ್ತವನ್ನು 10 ಕಂತುಗಳಲ್ಲಿ ಮರುಪಾವತಿ ಮಾಡುತ್ತೇನೆ ಎಂದು ಒಪ್ಪಿಕೊಂಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಅದಕ್ಕೆ ದಾಖಲೆಗಳಿರುವುದಿಲ್ಲ, ಸಾಕ್ಷಿಯು ಮೌಖಿಕವಾಗಿ ಒಪ್ಪಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಿಮ್ಮ ಪಿರ್ಯಾದಿನಲ್ಲಿ ಆರೋಪಿ 10 ತಿಂಗಳಲ್ಲಿ ಸಾಲದ ಮೊತ್ತವನ್ನು ಮರುಪಾವತಿ ಮಾಡುವ ಬಗ್ಗೆ 10 ಚೆಕ್ಕುಗಳನ್ನು ನೀಡಿದ್ದಾರೆ ಎಂದು ನಮೂದಿಸಿದ್ದೀರಿ ಆ ಚೆಕ್ಕುಗಳ ನಂಬರ್ ಗಳನ್ನು ಹೇಳಲು ಸಾಧ್ಯವೇ ಎಂದರೆ ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಕೊಟ್ಟಂತಹ 10 ಚೆಕ್ಕುಗಳ ನಂಬರ್ ಹಾಗೂ ದಿನಾಂಕವನ್ನು ನಮ್ಮ ಲೆಕ್ಕ ಪುಸ್ತಕದಲ್ಲಿ ನಮೂದಿಸಿರುವುದಿಲ್ಲ. ಆರೋಪಿ 10 ಚೆಕ್ಕುಗಳನ್ನು ಕೊಟ್ಟ ನಂತರ ಅವುಗಳನ್ನು ನಿಗದಿತ ಅವಧಿಯಲ್ಲಿ ಪ್ರತಿ ತಿಂಗಳು ನಗದೀಕರಣಕ್ಕಾಗಿ ಬ್ಯಾಂಕಿಗೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಆ ವೇಳೆಯಲ್ಲಿ ಕೋರೋನಾ ಇದ್ದ ಕಾರಣ ಆರೋಪಿ ಕೊಟ್ಟಂತಹ 10 ಚೆಕ್ಕುಗಳನ್ನು ಹಾಜರುಪಡಿಸಲು ಸಾಧ್ಯವಾಗಲಿಲ್ಲ ಆಗ ಆರೋಪಿಯೇ 10 ಹಳೆಯ ಚೆಕ್ಕುಗಳನ್ನು ವಾಪಸ್ ಪಡೆದುಕೊಂಡು 10 ಹೊಸ ಚೆಕ್ಕುಗಳನ್ನು ನೀಡಿದ್ದರು ಎಂದು ನುಡಿಯುತ್ತಾರೆ. ಕೋವಿಡ್ ಅವಧಿಯಲ್ಲಿ ನಿಮ್ಮ ಸಂಸ್ಥೆ ವ್ಯವಹಾರ ಮಾಡುತ್ತಿತ್ತೋ ಇಲ್ಲವೋ ಎಂದರೆ ಸಾಕ್ಷಿಯು ಸರ್ಕಾರದ ಆದೇಶದ ಮೇರೆಗೆ

ವ್ಯವಹಾರ ಮಾಡಿದೆವು ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.